# ಶಿವಪ್ಪ ನಾಯಕ 1645 -1660

## ಕೆಳದಿಯ ಪ್ರಸಿದ್ಧ ಅರಸ

# ಪೀಠಿಕೆ - Introduction

- ಕೆಳದಿ ಸಂಸ್ಥಾನವು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದು ಈತನ ಕಾಲದಲ್ಲೆ.
- ರಾಜಧಾನಿ ಬಿದನೂರುನಗರವನ್ನು ಅಭಿವೃದ್ಧಿಪಡಿಸಿ ಕೋಟೆಗಳನ್ನು ನಿರ್ಮಿಸಿದನು.
- ದೇಶದ ನಾನಾ ಭಾಗಗಳ ವ್ಯಾಪಾರಿಗಳನ್ನೂ ಕುಶಲಕರ್ಮಿಗಳನ್ನೂ ರಾಜಧಾನಿಗೆ ಆಹ್ವಾನಿಸಿ ವ್ಯಾಪಾರ-ವಾಣಿಜ್ಯವನ್ನು ಉತ್ತಮ ಪಡಿಸಿದನು.
- ಈತನ ಆಡಳಿತ ವ್ಯವಸ್ಥೆಯು ಶಿವಪ್ಪನಾಯಕನ ಶಿಸ್ತು ಎಂದು ಪ್ರಸಿದ್ಧವಾಗಿದೆ.
- ಪೋರ್ಚುಗೀಸರನ್ನೂ ಸೋಲಿಸಿದ ಹೆಗ್ಗಳಿಕೆ ಇವನದು.

# ಗಮನವಿಟ್ಟು ಓದಿಕೊಳ್ಳಿರಿ

- ವೀರಭದ್ರನಾಯಕ: ೧೬೨೯-೪೫: ಇವನು ಹಿಂದಿನ ಅರಸ ವೆಂಕಟಪ್ಪನ ಮಗ.
- ಈ ಅರಸನಿಗೆ ಬೆಂಬಲಿಗನಾಗಿದ್ದನು ಶಿವಪ್ಪನಾಯಕ
- ವೀರಭದ್ರನಾಯಕನ ಕಾಲದಲ್ಲಿ ವಿಜಾಪುರದ ಸುಲ್ತಾನರಿಗೆ ಸೋತು ಇಕ್ಕೇರಿಯವರು ಕಪ್ಪ ಕೊಡುವಂತಾಯಿತು
- ವೀರಭದ್ರನಾಯಕನ ಪತ್ನಿ ಗತಿಸಿದ್ದರಿಂದ ಅವನು ವೈರಾಗ್ಯ ತಳೆದನು
- ಇದರಿಂದಾಗಿ ರಾಜ್ಯದಲ್ಲಿ ಅರಾಜಕತೆ ಏರ್ಪಟ್ಟಿತು
- ಕಾರಣ ಮಂತ್ರಿಗಳು ಮತ್ತು ಅಧಿಕಾರಿಗಳು ಶಿವಪ್ಪನಾಯಕನಿಗೆ ಪಟ್ಟಗಟ್ಟಿದರು
- ಈಗ ಶಿವಪ್ಪನಾಯಕನ ಕರ್ತವ್ಯವೇನು?

# ಸೈನಿಕ ಸಾಧನೆಗಳು

- ಬೇಲೂರು ಕದನದಲ್ಲಿ ಶತೃಗಳನ್ನು ಸದೆಬಡಿದು, ತುರುವೆಕೆರೆ, ಹಾಸನ, ಚನ್ನರಾಯಪಟ್ಟಣ, ಕಡೂರು, ಸಕ್ರೆಪಟ್ಟಣ, ಹೊಳೆನರಸೀಪುರ, ಬೆಳಗುತ್ತಿ, ಬನವಾಸಿ, ಸೊರಬ, ಉಡುಗಣಿ ಮತ್ತು ಮಲಬಾರ್ ಪ್ರದೇಶಗಳನ್ನು ವಶಪಡಿಸಿಕೊಂಡನು
- ಮುಂದೆ ಪಶ್ಚಿಮ ತೀರದಲ್ಲಿದ್ದ ಪೋರ್ಚುಗೀಸರು, ಡಚ್ಚರು ಮತ್ತು ಆಂಗ್ಲರನ್ನು ಸೋಲಿಸಿ ಮಂಗಳೂರು, ಕುಂದಾಪುರ, ಗಂಗೊಳ್ಳಿ ಮತ್ತು ಹೊನ್ನಾವರ ಪ್ರದೇಶಗಳನ್ನು ವಶಪಡಿಸಿಕೊಂಡು ಕರಾವಳಿಯವರೆಗೆ ಹಿಡಿತ ಸಾಧಿಸಿದನು
- ಇದರಿಂದ ಶಿವಪ್ಪ ನಾಯಕನ -------

# ಶ್ರೀರಂಗರಾಯನಿಗೆ ಆಶ್ರಯ

- ಗೋಲ್ಕೊಂಡದ ಸುಲ್ತಾನನಿಂದ ಸೋತ ಶ್ರೀರಂಗರಾಯನಿಗೆ ಆಶ್ರಯ ನೀಡಿದನು
- ಅವನಿಗೆ ಬೇಲೂರು ಮತ್ತು ಸಕ್ಕರೆಪಟ್ಟಣಗಳ ಅಧಿಪತ್ಯವಹಿಸಿಕೊಟ್ಟನು
- ಮುಂದೆ ಶ್ರೀರಂಗರಾಯನು ಗತಿಸುವವರೆಗೂ ಅಲ್ಲಿಯೇ ಜೀವಿಸಿದ್ದನು
- ಇದು ಏನನ್ನು ಸೂಚಿಸುತ್ತದೆ?

# ಮೈಸೂರಿನ ಮೇಲೆ ಮುತ್ತಿಗೆ ಮತ್ತು ಮರಣ

- ಹಿಂದೆ ಬೇಲೂರು ಕದನದಲ್ಲಿ ಕಿರುಕುಳ ನೀಡಿದ್ದ ಮೈಸೂರು ಅರಸರ ವಿರುದ್ಧ ಶಿವಪ್ಪನು ದಂಡೆತ್ತಿ ಹೋದನು
- ಮೈಸೂರಿನ ಒಡೆಯ ದೇವರಾಜನು ದಳವಾಯಿ ಹಂಪರಾಜಯ್ಯನನ್ನು ಶಿವಪ್ಪನ ಸೇನೆಯನ್ನು ಎದುರಿಸಲು ಕಳುಹಿಸಿದನು
- ಆದರೆ ಹಂಪರಾಜಯ್ಯನು ಶಿವಪ್ಪನ ಸೇನೆಗೆ ಸೆರೆ ಸಿಕ್ಕನು
- ವಿಜಯಶಾಲಿಯಾದ ಸೈನ್ಯ ಶ್ರೀರಂಗಪಟ್ಟಣದತ್ತ ಮುಂದುವರಿಯಿತು
- ಆದರೆ ಕೋಟೆಯ ಮುತ್ತಿಗೆಯನ್ನು ಹಿಂಪಡೆಯಬೇಕಾಯಿತು
- ಕಾರಣವೇನಿರಬಹುದು?

# ಶಿವಪ್ಪನಾಯಕನ ಅಕಾಲಿಕ ಮರಣ

- ಶ್ರೀರಂಗಪಟ್ಟಣದ ಮುತ್ತಿಗೆಯ ಕಾಲಕ್ಕೆ ಅನಾರೋಗ್ಯ ಪೀಡಿತನಾದ ಶಿವಪ್ಪ ನಾಯಕನು ಮುತ್ತಿಗೆಯನ್ನು ಅರ್ಧಕ್ಕೆ ನಿಲ್ಲಿಸಿ ರಾಜಧಾನಿಗೆ ಹಿಂತಿರುಗಿದನು
- ಹೀಗೆ ವಾಪಾಸಾದ ಕೆಲವೇ ದಿನಗಳಲ್ಲಿ 1660 ರಲ್ಲಿ ಇಹಲೋಕ ತ್ಯಜಿಸಿದನು
- ಅವನ ಮರಣದ ಕಾಲಕ್ಕೆ ಕೆಳದಿಯು ಉತ್ತರದಲ್ಲಿ ವಿಜಾಪುರದಿಂದ ದಕ್ಷಿಣದಲ್ಲಿ ಶ್ರೀರಂಗಪಟ್ಟಣದವರೆಗೂ
- ಪೂರ್ವದಲ್ಲಿ ಚಿತ್ರದುರ್ಗದಿಂದ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದವರೆಗೂ ವಿಸ್ತರಿಸಿತ್ತು

# ಗಮನಿಸಿರಿ

- ಇವನ ಸೇನೆಯಲ್ಲಿ ೫೦,೦೦೦ ಅಶ್ವಪಡೆ & ೫೦,೦೦೦ ಕಾಲ್ದಳವಿತ್ತು
- ಪ್ರತಿ ಮನೆಯಲ್ಲೂ ಇಬ್ಬರು ಸೈನಿಕರಿರುತ್ತಿದ್ದರು
- ಎರಡು ಕುದುರೆ, ಎರಡು ತುಪಾಕಿ ಮತ್ತು ಎರಡು ಬೇಟೆ ನಾಯಿಗಳನ್ನು ಹೊಂದಿರುವುದು ಕಡ್ಡಾಯವಾಗಿತ್ತು
- ಇವುಗಳ ಉಪಯೋಗವೇನು?

# ಶಿವಪ್ಪ ನಾಯಕನ ಅರಮನೆ , ಶಿವಮೊಗ್ಗ



# ಶಿವಪ್ಪ ನಾಯಕನ ಅರಮನೆಯ ಮುಂಭಾಗದ ನೋಟ



# ಶಿವಪ್ಪ ನಾಯಕನ ಶಿಸ್ತು – ಗಮನವಿಟ್ಟು ಓದಿಕೊಳ್ಳಿರಿ

- ಕೆಳದಿಯು ಚಿಕ್ಕ ಸಂಸ್ಥಾನವಾದರೂ ಅದರ ಕಂದಾಯ ಆಡಳಿತವು ದಕ್ಷತೆಯಿಂದ ಕೂಡಿತ್ತು
- ಶಿವಪ್ಪನಾಯಕನ ಕಂದಾಯ ಸುಧಾರನೆಗೂ ಮುನ್ನ ಕುಳತೆರಿಗೆ, ಬೀಜಾವರಿ ತೆರಿಗೆ ಎಂಬ ಬೇರೆ-ಬೇರೆ ಪದ್ಧತಿಗಳು ರೂಢಿಯಲ್ಲಿದ್ದವು
- ಕಂದಾಯವನ್ನು ಧನ ಅಥವಾ ಧಾನ್ಯದ ರೂಪದಲ್ಲಿ ಕೊಡಬಹುದಾಗಿತ್ತು

# ಶಿವಪ್ಪನಾಯಕನ ಕಂದಾಯ ಸುಧಾರಣೆ ಅಥವಾ ಶಿಸ್ತ್ ಪದ್ಧತಿ

- 1೬೪೫ ರಲ್ಲಿ ಜಾರಿಗೆ ತರಲಾಯಿತು
- ಶಿಸ್ತ್ ಎಂಬ ಪಾರ್ಸಿ ಭಾಷೆಯ ಪದದಿಂದ ಶಿಸ್ತು ಪದದ ಉಗಮ
- ಶಿಸ್ತ್ ಎಂದರೆ ತೆರಿಗೆ ಅಥವಾ ಕಂದಾಯ
- ಒಂದು ವೇಳೆ ನೀವು ಶಿವಪ್ಪನಾಯಕನಾಗಿದ್ದಿದ್ದರೆ ಹೇಗೆ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಿರಿ, ಚರ್ಚಿಸಿ!

# ಶಿಸ್ತ್ ಪದ್ಧತಿಯ ಅಳವಡಿಕೆಗಾಗಿ ಕೈಗೊಂಡ ಕ್ರಮಗಳು:-

- ಭೂವರ್ಗೀಕರಣ, ಸರ್ಕಾರಿ ವೆಚ್ಚದಲ್ಲಿ ಸಾಗುವಳಿ, ಸಾಗುವಳಿ ವೆಚ್ಚದ ಲೆಕ್ಕ ನಿರ್ವಹಣೆ, ೫, ೧೦, 1೫ ವರ್ಷಗಳ ಸರಾಸರಿ ವೆಚ್ಚದ ಅಂದಾಜು, 1 ಕಂಡುಗ ಉತ್ಪನ್ನದ ಮೇಲೆ 1 ಹನ ಕಂದಾಯ ನಿಗದಿ
- ೧ ಹಣ ಎಂದರೆ ಒಂದು ಗದ್ಯಾಣದ ೧/೬ ಭಾಗ
- ಕೆಲವು ಉತ್ಪನ್ನಗಳ ಮೇಲೆ ೧/೩ ರಷ್ಟು ತೆರಿಗೆ ವಿಧಿಸಲಾಯಿತು
- ಅಂತೆಯೇ ಮಲೆನಾಡು ಹೊರತುಪಡಿಸಿ, ಕರಾವಳಿ ಮತ್ತು ಬಯಲುಸೀಮೆಗಳಲ್ಲಿ ೧/೩ ರಷ್ಟು ತೆರಿಗೆ ನಿಗದಿ ಮಾಡಲಾಯಿತು

**ಕೃಷಿ ಭೂಮಿಯ ವರ್ಗೀಕರಣ ಮತ್ತು ನಿಗದಿಗೊಳಿಸಿದ ತೆರಿಗೆ**

<u>1 ಖಂಡುಗ ಉತ್ಪಾದನೆಗೆ 1 ಹಣ ಕಂದಾಯ</u>

<u>1 ಖಂಡುಗ = 1೨೦ ಸೇರು</u>

- **ಉತ್ತಮ: ನೀರಾವರಿ ಸೌಲಭ್ಯವುಳ್ಳ ಎರೆನೆಲ – 2 ರಿಂದ 2ಲ ಆನೆಕಾಸು**
  **ಮಧ್ಯಮ: ಕೆಂಪುಮಣ್ಣಿನ ನೆಲ – 2 ರಿಂದ 1೦ ಆನೆಕಾಸು**
  **ಕನಿಷ್ಠ: ತೇವಾಂಶವುಳ್ಳ ಕಪ್ಪು ನೆಲ – 1½ ರಿಂದ ಲ ಕಾಸು**
  **ಅಧಮ: ಗಚ್ಚು ನೆಲ – ೧¼ ಕಾಸು**
  **ಅಧಮಾಧಮ: ಮರಳುಮಿಶ್ರಿತ ಬಂಜರು ನೆಲ – 1 ಕಾಸು**

# ತೋಟಗಳಿಗೆ ತೆರಿಗೆ ಹೇಗಿತ್ತು?

- ೧,೦೦೦ ಅಡಿಕೆ ಗಿಡಗಳಿಗೆ ೭-೨೫ ಗದ್ಯಾಣ
- ಉತ್ತಮ ಅಡಿಕೆ ಫಸಲು ತೆಗೆಯಲು 18½ ಅಡಿಗಳಿಗೆ ಒಂದು ಅಡಿಕೆ ಗಿಡ
- ತೆರಿಗೆ ವಿನಾಯಿತಿಗಳು:
- ನೈಸರ್ಗಿಕ ವಿಕೋಪಗಳಿಂದ ಬೆಳೆನಷ್ಟವಾದಾಗ ವಿನಾಯಿತಿ
- ಅತಿವೃಷ್ಟಿ, ಅನಾವೃಷ್ಟಿ, ಮಿಡತೆ ಹಾವಳಿ, ನೆರೆ ಹಾವಳಿ, ಬೂ ಕುಸಿತ, ಬಾವಿ ಕುಸಿತ
- ಕೆಲವು ವರ್ಗದ ಜನರಿಗೂ ವಿನಾಯಿತಿ: ಬ್ರಾಹ್ಮಣರು, ಸ್ವರ್ಣಕಾರರು, ಕೋಮಟಿಗರು, ತಿಗಳು, ಮೇದಾರರು, ಹುವಾಡಿಗರು
- ಶಿಸ್ತ್ ಪದ್ಧತಿಯು ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಸೊರಬ, ಶಿಕಾರಿಪುರ ಮೊದಲಾದ ಭಾಗಗಳಲ್ಲಿ ಚಾಲ್ತಿಯಲ್ಲಿತ್ತು

# ಗಮನಿಸಿರಿ

- ಇನ್ನುಳಿದ ಕಡೆಗಳಲ್ಲಿ ಪಟ್ಟಾ ಪದ್ಧತಿ ರೂಢಿಯಲ್ಲಿತ್ತು
- ಇದರಲ್ಲಿ ಉತ್ಪನ್ನದ **1/3** ರಷ್ಟು ಕಂದಾಯ ನಿಗದಿ ಮಾಡಲಾಗಿತ್ತು
- ಶಿಸ್ತ್ ಪದ್ಧತಿಯು ತೋದರಮಲ್ಲನ ಬಂದೋಬಸ್ತ್ ಪದ್ಧತಿಯಿಂದ ಪ್ರೇರಿತ.
- **1**೮೨೦ ರಲ್ಲಿ ಮಂಗಳೂರಿನ ಕಲೆಕ್ಟರ್ ಮನ್ರೊ "ರೈತರು ಉತ್ಪನ್ನದ **1/3** ರಷ್ಟು ತೆರಿಗೆ ಕೊಡುತ್ತಾರೆ. ಬಿತ್ತನೆ ಆಧಾರದಲ್ಲಿ ತೆರಿಗೆ ನಿಗದಿಪಡಿಸಲಾಗಿತ್ತು. ತೆರಿಗೆ ಹಗುರವಾಗಿತ್ತು. ರೈತರು ಸಂತೋಷದಿಂದಿದ್ದು, ಕಂದಾಯ ಬಾಕಿಗಳು ಇರಲಿಲ್ಲ. "

# ಕೆಳದಿ ನಾಯಕರ ನಾಣ್ಯ ಪದ್ಧತಿ

- ವರಹ- ಚಿನ್ನ: =೫೨ ಗ್ರೈನ್ = 2 ಗದ್ಯಾಣ
- 1 ಗದ್ಯಾಣ - ಚಿನ್ನ =  2೬ ಗುಲಗಂಜಿ = 2 ಹೊನ್ನು
- ೧ ಹೊನ್ನು  - ಚಿನ್ನ = 1೩ ಗುಲಗಂಜಿ = ೨ ಧರಣ
- 1 ಧರಣ – ಚಿನ್ನ = 6½  ಗುಲಗಂಜಿ = ೫ ಹಣ/ಆಣೆ
- 1 ಹಣ – ಬೆಳ್ಳಿ = ೬ ಗುಲಗಂಜಿ = 2 ಅಡ್ಡ
- ೩/೪ ಹಣ = ಮುಪ್ಪಾಗ = ೩.೫ ಗ್ರೈನ್

- ೧ ಅಡ್ಡ - ಬೆಳ್ಳಿ = ೨.೫ ಗ್ರೈನ್ =೨ ಹಾಗ
- ೧ ಹಾಗ - ಬೆಳ್ಳಿ = ೨ ಬೇಳೆ = ೧.೨೫ ಗ್ರೈನ್
- ೧ ಹಾಗ = - ಬೆಳ್ಳಿ ೪ ವೀಸ = ೧.೨೫ ಗ್ರೈನ್
- ೧ ವೀಸ - ಬೆಳ್ಳಿ = ೨ ಅರೆವೀಸ = ೦.೬ ಗ್ರೈನ್
- ೧ ಹಾಗ - ಬೆಳ್ಳಿ = ೧೬ ಕಾಸು = ೧.೨೫ ಗ್ರೈನ್
- ೧ ತಾರ - ಬೆಳ್ಳಿ = ೪ ಕಾಸು
- ೧ ಅರೆವೀಸ - ಬೆಳ್ಳಿ = ೨ ಕಾಸು
- 1 ಕಾಸು – ತಾಮ್ರ = ೩ ಗ್ರೇನ್